**ಒ.ಎಸ್.ನಂಬ್ರ: 12/2017 ಆರ್ .ಡಬ್ಲ್ಯೂ :1**

ದಿನಾಂಕ: 16-09-2021

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀ ಸವಾಲು : 1 ರಿಂದ 10 ಮತ್ತು 33 ನೇ ಎದುರುದಾರರ ಪರ ವಕೀಲರಾದ ಶ್ರೀ ಎಂ.ಎಸ್.ಎ ವಕೀಲರಿಂದ

ಈ ನ್ಯಾಯಾಲಯವು ಒಎಸ್ ನಂಬ್ರ 276/2002 ದ ದಾವೆಯಲ್ಲಿ ನೀಡಿದ ಪ್ರಿಲಿಮಿನರಿ ಡಿಕ್ರಿಯ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಆರ್ ಎ ನಂಬ್ರ 98/2006 ರ ತೀರ್ಪಿನಲ್ಲಿ ಒಎಸ್ ನಂಬ್ರ 98/2006 ರ ತೀರ್ಪನ್ನು ವಜಾಗೊಳಿಸಿರುತ್ತಾರೆಂದರೆ ಸರಿ ಆದರೆ ನನ್ನ ಹಕ್ಕನ್ನು ತೆಗೆದುಕೊಳ್ಳಲು ಅನುಮತಿ ನೀಡಿರುತ್ತಾರೆ. ಸದ್ರಿ ಆರ್ ಎ ನಂಬ್ರ 98/2006 ರ ತೀರ್ಪಿನಲ್ಲಿ ದಾವಾ ಆಸ್ತಿಗಳು 5 ಭಾಗಗಳಾಗಿ ವಿಂಗಡಿಸಬೇಕೆಂದು ಆದೇಶಿಸಿರುತ್ತಾರೆ. 33 ನೇ ಎದುರುದಾರರಿಗೆ ಸಹಾ ಕೂಡಾ ಖರೀದಿ ಹಕ್ಕು ಮತ್ತು ಕುಟುಂಬದ ಹಕ್ಕನ್ನು ತೆಗೆದುಕೊಳ್ಳಲು ಅನುಮತಿ ನೀಡಿರುತ್ತಾರೆಂದರೆ ಸರಿ . 33 ನೇ ಎದುರುದಾರರಿಗೆ ಅವರ ಕ್ರಯ ಪತ್ರದ ಪ್ರಕಾರ ಸ್ಥಳವನ್ನು ನೀಡಬೇಕೆಂದು ಅದೇಶ ಮಾಡಿರುತ್ತಾರೆಂದರೆ ಸರಿ .

ನ್ಯಾಯಾಲಯದ ಆಯುಕ್ತರು ದಾವಾ ಆಸ್ತಿಗಳನ್ನು ಒಎಸ್ ನಂಬ್ರ 276/02 ರಲ್ಲಿ ನೀಡಿದ ತೀರ್ಪಿಗನುಗುಣವಾಗಿ ವಿಭಜಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಪ್ರಿಲಿಮಿನರಿ ಡಿಕ್ರಿ ಪ್ರಕಾರ ನ್ಯಾಯಾಲಯದ ಅಯುಕ್ತರು ವಿಭಜನೆ ಮಾಡಿರುವುದರಿಂದ 33 ನೇ ಎದುರುದಾರರಿಗೆ ಅವರ ಹಕ್ಕಿಗೆ ಅನುಸಾರವಾಗಿ ಸ್ಥಳ ವಿಭಜನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಅರ್ಜಿದಾರರೆಲ್ಲರೂ ಸೇರಿ 33 ನೇ ಎದುರುದಾರರ ಹಕ್ಕನ್ನು ಕಸಿದುಕೊಳ್ಳಬೇಕೆಂದು ಪ್ರತಿಯತ್ನಿಸಿರುತ್ತೇವೆಂದರೆ ಸರಿಯಲ್ಲ.

**ಪಾಟೀ ಸವಾಲು: 16 ನೇ ಎದುರುದಾರರ ಪರ ಶ್ರೀ ಕೆ.ಸಿ.ಎಸ್ ವಕೀಲರಿಂದ**

16 ನೇ ಎದುರುದಾರ ಹಾಗೂ ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು .

**ಪಾಟೀ ಸವಾಲು: 29 ನೇ ಎದುರುದಾರರ ಪರ ವಕೀಲರಾದ ಶ್ರೀ ಟಿ.ಜಿ.ಆರ್ ರವರಿಂದ**

ಶ್ರೀ ಟಿ.ಜಿ.ಆರ್ ವಕೀಲರು ಪಾಟೀ ಸವಾಲು ಇರುವುದಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲ**

**ಓ.ಹೇ.ಕೇ.ಸ.ಇದೆ** **ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**